ಬೆಳ್ತಂಗಡಿ ಬಳಿ ಆನೆಗಳನ್ನು ಕೊಂದಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಇದನ್ನು ಸ್ವಲ್ಪ ದಯವಮಾಡಿ ನೋಡಬೇಕಾಗುತ್ತದೆ ಮತ್ತೆ ಇನ್ನೊಂದು ವಿಷಯ ಎಂದರೆ ನಿನ್ನೆ ತಾನೆ ಇಲ್ಲಿ ಪ್ರಸ್ತಾಪವಾಯಿತು ಆನೆಗಳ ದಂತವನ್ನು ಕಡಿಯತಕ್ಕಂತಾದ್ದು, ಆನೆಗಳನ್ನು ಕೊಲ್ಲತಕ್ಕಂಥದ್ದು, ಇವುಗಳ ಬಗ್ಗೆ ಚರ್ಚೆ ಆಯಿತು ಈಗ ಮತ್ತೆ ಬೆಳ್ತಂಗಡಿ ಬಳಿ ಆನೆಗಳನ್ನು ಕೊಂದಿರತಕ್ಕಂಥ ನಿದರ್ಶನ ಬಂದಿದೆ ಅಲ್ಲಿಯೂ ಜನರು ಭಯಭೀತರಾಗಿದ್ದಾರೆ ಮತ್ತೆ ವೀರಪ್ಪನ್ ತಂಡ ಆ ಕಡೆ ಬಂದಿದೆಯೇ ಎಂದು ಇದರ ಬಗ್ಗೆ ದೊಡ್ಡ ಯೋಚನೆ ಪ್ರಾರಂಭವಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ತನಿಖೆ ಮಾಡಬೇಕಾಗುತ್ತದೆ. ಈ ರೀತಿ ಆನೆಗಳನ್ನು ಪ್ರತಿನಿತ್ಯ ಕೊಲ್ಲುತ್ತಿದ್ದಾರೆ ಇದನ್ನು ನೋಡಿದರೆ ಸರ್ಕಾರ ಇದರ ಬಗ್ಗೆ ಜವಾಬ್ದಾರಿ ವಹಿಸಿಲ್ಲ ಎಂದು ಕಂಡುಬರುತ್ತದೆ. ಈಗಾಗಲೇ ಬೆಳ್ತಂಗಡಿಯಲ್ಲಿ ಆನೆಗಳನ್ನು ಕಡಿದು ಹಾಕಿದ್ದಾರೆ ಸರಿಯಾದ ಶವಸಂಸ್ಕಾರ ಮಾಡಿಲ್ಲ ಇದೊಂದು ಬಹಳ ದೊಡ್ಡ ದುರಂತವಾಗಿದೆ ಜನರು ಭಯಭೀತರಾಗಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎಂದು ನೋಡಬೇಕಾಗಿದೆ.ನೆನ್ನೆಯ ದಿವಸ ಒಂದು ರೀತಿಯಲ್ಲಿ ವೇಗ್ ಆಗಿ ಉಡಾಫ್ ರೀತಿ ಮಾತನಾಡಿದರು ಇವೊತ್ತು ಪ್ರತಿ ತಾಲ್ಲೂಕಿನಲ್ಲಿಯೂ ಈ ತರಹ ಪ್ರಾರಂಭವಾದರೆ ಹೇಗೆ ? ಇದನ್ನು ತಡೆಗಟ್ಟಲಿಕ್ಕೆ ನಮ್ಮ ಅರಣ್ಯ ಇಲಾಖೆ ಪೋಲೀಸ್ ಇಲಾಖೆ ಸರ್ಕಾರ ಏನು ನಿದ್ದೆ ಮಾಡುತ್ತಿದೆಯೇ ಎನ್ನುತಕ್ಕೆ ಪ್ರಶ್ನೆ ಬರುತ್ತದೆ ಆದ್ದರಿಂದ ತಾವು ಸರ್ಕಾರಕ್ಕೆ ದಯವಮಾಡಿ ಈ ಬಗ್ಗೆ ಒಂದು ಪರಿಣಾಮಕಾರಿಯಾದ ವರದಿಯನ್ನು ತರಿಸಲಿಕ್ಕೆ ಹೇಳಬೇಕು ಇದರ ಬಗ್ಗೆ ಒಂದು ತನಿಖೆಯನ್ನು ಮಾಡಿಸಬೇಕು ಎಂದು ಅಧ್ಯಕ್ಷರ ಪಂಥಾಲಕ ಗಮನ ಸೆಳೆಯುತ್ತಿದ್ದೇನೆ ಮತ್ತು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಈ ಸಂಜೆಯೊಳಗೆ ಇದರ ಬಗ್ಗೆ ವರದಿ ತರಿಸುತ್ತೇವೆ.

ಗಮನ ಸೆಳೆಯುವ ಸೂಚನೆ

ಕಾಸರಗೋಡಿನ ವಿದ್ಯಾರ್ಥಿಗಳಿಗೆ ಪ್ರೊವಿಷನಲ್ ಸರ್ಟಿಫಿಕೇಟ್ ನೀಡದಿರುವುದರಿಂದ ತೊಂದರೆ

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಪ್ರೊವಿಜನಲ್ ಸರ್ಟಿಫಿಕೇಟ್ ನೀಡದಿರುವುದರಿಂದ ಕಾಸರಗೋಡಿನ ಅನೇಕ ಕನ್ನಡ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಅಧ್ಯಕ್ಷರೆ ನಾಳೆಗೆ ಇದನ್ನು ತೆಗೆದುಕೊಳ್ಳಲಿಕ್ಕೆ ಅವಕಾಶಕೊಡಿ ನಾಳೆ ಉತ್ತರ ಹೇಳುತ್ತೇನೆ.

ಅಧ್ಯಕ್ಷರು.—ನಾಳೆ ತೆಗೆದುಕೊಳ್ಳೋಣ

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ ಆಗಬಹುದು ನಾಳೆಯೇ ಉತ್ತರ ಹೇಳಬಹುದು.

ನಿಯಮ ೩೫ಳಿರ ವೇರೆಗೆ

ಗಂಡಸಿನ ಕ್ಷೇತದಲ್ಲಿ ಮಳೆ ಬೀಳದೆ ಅನಾವೃಷ್ಟಿ

೧೨.೦೦ ಪಿ.ಯಂ.

ಶ್ರೀ ಬಿ. ಶಿವರಾಮು.— ಹಾಸನ ಜಿಲ್ಲೆಯ ಪೂರ್ವಭಾಗ ಮತ್ತು ಅರಸೀಕೆರೆ ತಾಲ್ಲೂಕನ್ನು ಒಳಗೊಂಡಿರುವ ನನ್ನ ಗಂಡಸಿ ಕ್ಷೇತ್ರದಲ್ಲಿ ಮುಂಗಾರು ಮಳೆ ಬೀಳದೆ ಅನಾವೃಷ್ಟಿ ಉಂಟಾಗಿದೆ. ಇದರಿಂದ ದನ ಕರುಗಳಿಗೆ ಕುಡಿಯಲು ನೀರಿನ ಮತ್ತು ಮೇವಿನ ಬವಣೆ ಅತಿಯಾಗಿದೆ. ಜನರಿಗೂ ಕೂಡ ನೀರಿನ ಬವಣೆ ಮತ್ತು ನಿರುದ್ಯೋಗ ಹೆಚ್ಚಾಗಿದೆ ಪ್ರಮುಖ ವಾಣಿಜ್ಯ ಬೆಳೆಯಾದ ಆಲೂಗಡ್ಡೆಯನ್ನು ರೈತರು ಬೆಳೆ ಮಾಡದೆ ರೂ. ೪೦೦ ಕ್ವಿಂಟಾಲ್‌ಗೆ ಕೊಂಡ ಬೀಜವನ್ನು ರೂ. ೨೦೦ ಕ್ವಿಂಟಾಲ್‌ಗೆ, ಮಾರಾಟ ಮಾಡುವ ವ್ಯವಸ್ಥೆ ಉಂಟಾಗಿದೆ. ತೆಂಗಿನ ಗಿಡಗಳು ಒಣಗಿ ಕಾಯಿಗಳು ಉದುರುವ ಪರಿಸ್ಥಿತಿ